ಕರೆಸಿ, ಅಲ್ಲಿರತಕ್ಕಂಥ ಶಾಸಕರುಗಳನ್ನು ಕರೆಯಿಸಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿ, ಕೂಡಲ ಸಂಗಮ ಸಂಕೀರ್ಣದ ಅಭಿವೃದ್ಧಿ ಎಂದರೆ ರಸ್ತೆ, ದೇವಾಲಯದ ಎಡಭಾಗ ಪ್ರದೇಶದ ಸುಧಾರಣೆ ಮಾಡುವುದಕ್ಕೆ, ಕ್ಯಾಂಟೀನ್, ಪ್ರವಾಸ ಸಂಕೀರ್ಣ, ಭೋಜನ ಮಂದಿರ, ಬಯಲು ಮಂದಿರ, ಸಭಾಮಂಟಪ ಬಸವ ಅಂತರರಾಷ್ಟ್ರೀಯ ಕೇಂದ್ರ ಹಾಗೂ ಮಹಾದ್ವಾರ, ದೇವಾಲಯ ಸಂಕೀರ್ಣ ಮತ್ತು 600 ಎಕರೆ ಪ್ರದೇಶದಲ್ಲಿ ಒಂದು ತೋಟಗಾರಿಕೆ, ನೀರು ಸರಬರಾಜು ವ್ಯವಸ್ಥೆ ಇಷ್ಟು ಕಾರ್ಯಕ್ರಮಗಳು ಸೇರಿ ಸುಮಾರು 27.22 ಕೋಟಿ ರೂಪಾಯಿಗಳ ಆಡಳಿತಾತ್ಮಕ ಮಂಜೂರಾತಿಯನ್ನು ನಮ್ಮ ಸರ್ಕಾರ ಕೊಟ್ಟಿದೆ. ಆ ಹಣವನ್ನು ನೀರಾವರಿ ಇಲಾಖೆಯಿಂದ ಬಳಸಿ ಎರಡು ವರ್ಷಗಳಲ್ಲಿ ಈ ಕೆಲಸವನ್ನು ಸಂಪೂರ್ಣವಾಗಿ ಮುಗಿಸಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಉಪಾಧ್ಯಕ್ಷರು : ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗಿರುವ ಪ್ರದೇಶದ ರೈತರಿಗೆ ಪರಿಹಾರವನ್ನು ಜರೂರಾಗಿ ನೀಡಿಲ್ಲದಿರುವ ಬಗ್ಗೆ ತಂದಿರುವ ನಿಲುವಳಿ ಸೂಚನೆಯನ್ನು ನಿರಾಕರಿಸಲಾಗಿದೆ. ಈಗ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಮಾನ್ಯ ಸಚಿವರ ಗಮನ ಸೆಳೆಯುವುದು.

ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ರಾಜ್ಯದಲ್ಲಿ ವಿದ್ಯುತ್ ಖೋತದಿಂದ ಆಗಿರುವ ತೊಂದರೆ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ಖೋತಾದಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಮಾತನಾಡಲು ಶೂನ್ಯ ವೇಳೆಯಲ್ಲಿ ನಮಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ಈಗ ಅಜೆಂಡಾ ಪ್ರಕಾರ ಹೋಗೋಣ. ತಾವೆಲ್ಲಾ ಸಹಕಾರ ಕೊಡಬೇಕು. ನಿನ್ನೆಯ ದಿವಸ ಕೂಡ ವಿಧೇಯಕದ ಮೇಲೆ ಚರ್ಚೆ ಆಗಲಿಲ್ಲ ದಯವಿಟ್ಟು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುತ್ ಖೋತಾದಿಂದಾಗಿ ರಾಜ್ಯದಲ್ಲಿ ಅಧ್ವಾನವಾಗಿ ಹೋಗಿದೆ. ವಿದ್ಯುತ್ ಖೋತಾದಿಂದ ವಿದ್ಯಾರ್ಥಿಗಳಿಗೆ, ರೋಗಿಗಳಿಗೆ, ಜನಗಳಿಗೆ ಬಹಳ ತೊಂದರೆಯಾಗಿದೆ. ಸರ್ಕಾರ ಹೀಗೆ ಮಾಡಿದರೆ ಹೇಗೆ? ವಿದ್ಯುತ್ ಅಭಾವದ ಮೇಲೆ ಚರ್ಚೆ ನಡೆಸಲು ದಯವಿಟ್ಟು ಅವಕಾಶ ಕೊಡಲೇ ಬೇಕು.

ಉಪಾಧ್ಯಕ್ಷರು : ನಾವು ಅಜೆಂಡಾದ ಪ್ರಕಾರ ಹೋಗೋಣ. ನಿನ್ನೆಯ ದಿವಸ ಬೇಡಿಕೆ ಮೇಲೆ ಚರ್ಚೆ ಆಗಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ವಿದ್ಯುತ್ ಕಡಿತದಿಂದ ವಿದ್ಯಾರ್ಥಿಗಳಿಗೆ, ರೈತರಿಗೆ ಕುಡಿಯುವ ನೀರಿಗೆ ಹೀಗೆ ಎಲ್ಲದಕ್ಕೂ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರ ಸಮಗ್ರವಾದ ಹೇಳಿಕೆ ಕೊಡಲಿ.

ಉಪಾಧ್ಯಕ್ಷರು : ಬಜೆಟ್ ಮೇಲೆ ಪ್ರಸ್ತಾಪ ಮಾಡುವ ಸಮಯದಲ್ಲಿ ವಿದ್ಯುಚ್ಛಕ್ತಿ ವಿಷಯವಾಗಿ ಮಾತನಾಡುವುದಕ್ಕೆ ತಮಗೆ ಅವಕಾಶವಿದೆ. ಆಗ ತಾವು ಮಾತನಾಡಿ. ಈಗ ಅಜೆಂಡಾ ಪ್ರಕಾರ ಸದನ ನಡೆಸುವುದಕ್ಕೆ ಅವಕಾಶ ಮಾಡಿಕಕೊಡಿ. ಈಗ ಮಾತನಾಡುವುದಕ್ಕೆ ನಿಮಗೆ ಅವಕಾಶವಿಲ್ಲ. ಈ ರೀತಿ ನೀವು ಮಾಡಿದರೆ ಅಧಿವೇಶನ ನಡೆಸುವುದು ಹೇಗೆ? ನೀವು ನಿಯಮದ ಪ್ರಕಾರ ಮಾತನಾಡಬೇಕು. ನಿಯಮ ಬಿಟ್ಟು ಹೋಗುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುಚ್ಛಕ್ತಿಗೆ ಬಹಳ ಪ್ರಾಮುಖ್ಯತೆ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ಇದಕ್ಕೆ ಒಂದಕ್ಕೆ ಪ್ರಾಮುಖ್ಯತೆ ಅಲ್ಲ. ಎಲ್ಲಾ ವಿಷಯಗಳೂ ಕೂಡ ಪ್ರಾಮುಖ್ಯತೆ ಇರುತ್ತವೆ. ತಾವು ತಂದಂಥ ವಿಷಯ ಅಷ್ಟೇ ಪ್ರಾಮುಖ್ಯತೆ ಅಲ್ಲ, ಇಲ್ಲಿ ಸದನದಲ್ಲಿ ನಡೆಯುವಂಥ ಎಲ್ಲಾ ವಿಷಯಗಳಿಗೂ ಪ್ರಾಮುಖ್ಯತೆ ಹೊಂದಿರುತ್ತವೆ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಮಾತನಾಡಲು ಅವಕಾಶ ಕೊಡದಿದ್ದರೆ ನಾವು ಧರಣಿ ನಡೆಸುತ್ತೇನೆ.

(ಈ ಹಂತದಲ್ಲಿ ವಾಟಾಳ್ ಪಕ್ಷದ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಸಿ.ಪಿ.ಎಂ. ಪಕ್ಷದ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಅವರು ಧರಣಿ ನಡೆಸಿದರು).

(ಗೊಂದಲ)

ಉಪಾಧ್ಯಕ್ಷರು : ನಾಳೆ ಬಜೆಟ್ ಮೇಲೆ, ಬೇಡಿಕೆಯ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡಿ. ತಾವುಗಳು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ನಾವು ಮತ್ತು ವಾಟಾಳ್‌ನಾಗರಾಜ್‌ರವರು ಇದನ್ನು ನಿನ್ನೆಯೇ ಕೊಟ್ಟಿದ್ದು, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದೇವೆ.

ಉಪಾಧ್ಯಕ್ಷರು : ತಾವು ಶೂನ್ಯವೇಳೆಯನ್ನು ಮೂರು ಗಂಟೆಗಳ ಕಾಲ ಚರ್ಚೆ ಮಾಡುತ್ತೀರಿ, ಪ್ರಶ್ನೋತ್ತರ ವೇಳೆಗೆ ಮೂರು ಗಂಟೆ ತೆಗೆದುಕೊಳ್ಳುತ್ತೀರಿ, ಒಂದು ಗಂಟೆ ಇರತಕ್ಕ ಶೂನ್ಯ ವೇಳೆ, ಪ್ರಶ್ನೋತ್ತರ ವೇಳೆಯನ್ನು ಮೂರುಗಂಟೆ ಚರ್ಚೆ ಮಾಡಿದರೆ ಹೇಗೆ? ಆ ರೀತಿ ಮಾಡಿದರೆ ಸದನವನ್ನು ನಡೆಸುವುದು ಹೇಗೆ? ಶೂನ್ಯವೇಳೆಯಲ್ಲಿ ಈವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇಪ್ಪತ್ತು ಜನರು ಹೆಸರು ಕೊಡುತ್ತೀರಿ. ಹೀಗಾದರೆ ಸದನ ನಡೆಸಲು ಆಗುವುದಿಲ್ಲ. ತಾವು ದಯಮಾಡಿ ಸಹಕಾರವನ್ನು ಕೊಡಬೇಕು. ತಾವೆಲ್ಲರೂ ಹಿರಿಯ ಸದಸ್ಯರುಗಳಾಗಿದ್ದೀರಿ.

ಶ್ರೀ ಎಸ್. ಸುರೇಶ್‌ಕುಮಾರ್ : ತಾವು ದಯಮಾಡಿ ಸ್ವಲ್ಪ ಸಮಯ ಸದನವನ್ನು ಮುಂದೂಡಿ ಅನಂತರ ಶೂನ್ಯವೇಳೆಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ. ಇದು ಬಹಳ ತುರ್ತು ವಿಚಾರವಾಗಿದೆ.

ಉಪಾಧ್ಯಕ್ಷರು : ಹಾಗಿದ್ದರೆ ಬೇಡಿಕೆಯ ಬಗ್ಗೆ ಚರ್ಚೆ ಬೇಡವೇ? ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನವಾಗಿರುವಂತೆ ಸದನವನ್ನು ನಡೆಸುವುದೋ ಅಥವಾ ಅದನ್ನು ಬಿಟ್ಟು ನಡೆಸುವುದೋ ನೀವೇ ಹೇಳಿ? ಹೀಗಾದರೆ ಸದನವನ್ನು ಹೇಗೆ ನಡೆಸುವುದು? ಶೂನ್ಯ ವೇಳೆಗೆ 25 ನೋಟೀಸ್ ಇದೆ. ಇಂದು ವಾರದ ಕಡೆಯ ದಿನವಾಗಿರುವುದರಿಂದ ಸದನವನ್ನು ಎರಡು ಗಂಟೆಗೆ ಮುಕ್ತಾಯ ಮಾಡಿ ಎಂದು ನೀವೇ ಹೇಳುತ್ತೀರಿ, ಮತ್ತೆ ಶೂನ್ಯ ವೇಳೆಯಲ್ಲಿ ಅಷ್ಟು ನೋಟೀಸ್ ಕೊಡುತ್ತೀರಿ. ಹೀಗಾದರೆ ಹೇಗೆ? ಈಗ ಹದಿನೈದು ನಿಮಿಷ ಸಭೆಯನ್ನು ಮುಂದೂಡೋಣ. ತಾವೂ ಬನ್ನಿ ಚರ್ಚೆ ಮಾಡಿ ಅನಂತರ ಸಭೆ ಸೇರೋಣ.

ಈಗ ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 12.50ಕ್ಕೆ ಮುಂದೂಡಲ್ಪಟ್ಟು ಮತ್ತೆ ಹದಿನೈದು ನಿಮಿಷಗಳ ನಂತರ ಸೇರಲು ನಿಶ್ಚಿಯಿಸಿತು).

(ಸದನವು ಪುನಃ ಮಧ್ಯಾಹ್ನ 1.10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ ಎಂ. ಮಾಮನಿ) ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಪ್ರಕಟಣೆ

ಉಪಾಧ್ಯಕ್ಷರು : ಇನ್ನು ಮೇಲೆ ಬೇಡಿಕೆಗಳ ಮೇಲಿನ ಚರ್ಚೆ ಮುಗಿಯುವವರೆಗೆ ಪ್ರತಿ ದಿನ ಬೆಳಿಗ್ಗೆ ಬೇಡಿಕೆಗಳ ಮೇಲೆ ಚರ್ಚೆಯಾದ ನಂತರ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಪ್ರಶ್ನೋತ್ತರ ತೆಗೆದುಕೊಳ್ಳಲಾಗುವುದು. ಪುನಃ 4 ಗಂಟೆಯಿಂದ ಬೇಡಿಕೆಗಳ ಮೇಲೆ ಪುನಃ ಚರ್ಚೆ ಮುಂದುವರೆಯುವುದು. ಇನ್ನು ಮೇಲೆ ಪ್ರತಿ ಸೋಮವಾರ ಸದನವು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದು. ಪ್ರತಿ ಮಂಗಳವಾರ, ಗುರುವಾರ ಸದನವು ಬೆಳಿಗ್ಗೆ 10 ಗಂಟೆಗೆ ಸೇರಿದರೆ, ಪ್ರತಿ ಶುಕ್ರವಾರ ಸದನವು ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲಿದೆ.

ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕಿರ್ಲೋಸ್ಕರ್ ಬ್ಯಾಟರೀಸ್ ಕಾರ್ಖಾನೆಯ ಕಾರ್ಮಿಕರ ಚಳುವಳಿ

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಉಪ ಸಭಾಧ್ಯಕ್ಷರೆ, ರಾಜಾಜಿನಗರ ಕ್ಷೇತ್ರದಲ್ಲಿ ಒಂದು ಕಿರ್ಲೋಸ್ಕರ್ ಬ್ಯಾಟರೀಸ್ ಎಂಬ ಒಂದು ಕಾರ್ಖಾನೆ ಇದೆ. ಕಳೆದ 67 ದಿನಗಳಿಂದ ಅಲ್ಲಿನ ಕಾರ್ಮಿಕರು ತಮ್ಮ ನ್ಯಾಯಯುತವಾದ ಬೇಡಿಕೆಗಳಿಗೋಸ್ಕರ ಚಳುವಳಿ ನಡೆಸುತ್ತಾ ಬಂದಿದ್ದಾರೆ.17 ಜನ ಕಾರ್ಮಿಕರಿಗೆ ಯಾವುದೇ ಕಾರಣ ಕೊಡದೆ ಅಮಾನತ್ತುಗೊಳಿಸುವುದರ ವಿರುದ್ಧ ಈ ಚಳುವಳಿ ನಡೆಯುತ್ತಾ ಬಂದಿದೆ. ಇದುವರೆಗೆ ಕೂಡ ಆ ಆಡಳಿತ ಮಂಡಳಿ ಯಾವುದೇ